ಹೊಡೆಯ ಬೇಡವೆಂದು ಕೇಳಿಕೊಂಡಿದ್ದೇನೆ. ಅದಕ್ಕವನು ಒಪ್ಪಿಕೊಂಡಿದ್ದಾನೆ. ಆ ಮನುಷ್ಯ ತನ್ನ ಮನಸ್ಸನ್ನು ಬದಲಾಯಿಸುವುದರೊಳಗೆ ನೀನು ಇಲ್ಲಿಂದ ಓಡಿ ಹೋಗು. ಆಮೇಲೆ ನಿನ್ನನ್ನು ಭೇಟಿಯಾಗಿ ನನಗೆ ನೀನು ಕೊಡಬೇಕಾದ ಕಾಣಿಕೆಯನ್ನು ತೆಗೆದುಕೊಳ್ಳುತ್ತೇನೆ' ಎಂದಿತು.

ನರಿಯ ಮಾತನ್ನು ಕೇಳಿ ಹುಲಿರಾಯ ಎದ್ದೆನೋ, ಬಿದ್ದೆನೋ ಎಂದು ಶರವೇಗದಲ್ಲಿ ಜಿಗಿದು ಅಲ್ಲಿಂದ ಓಡಿಹೋಯಿತು.

ನರಿ ಈಗ ರಾಮುನ ಬಳಿಗೆ ಬಂದು 'ಸ್ವಾಮಿ, ಹುಲಿ ನಿನ್ನನ್ನು ತಿನ್ನಬೇಕೆಂದು ಗಟ್ಟಿ ನಿರ್ಧಾರವನ್ನು ಮಾಡಿಕೊಂಡಿತ್ತು. ನಾನು ಹುಲಿಯಣ್ಣನ ಮನಸ್ಸನ್ನು ಬದಲಾಯಿಸಿ ಇಲ್ಲಿಂದ ಓಡಿಸಿದೆ. ನೀನು ನನಗೆ ಕೊಟ್ಟಿರುವ ಮಾತು ನೆನಪಿದೆ ತಾನೇ? ನುಡಿದಂತೆ ನಡೆಯುತ್ತೀಯಾ ಎಂಬ ನಂಬಿಕೆ ನನಗಿದೆ. ಅದರಂತೆ ಈಗ ನನಗೆ ನಿನ್ನ ದೇಹದಲ್ಲಿರುವ ಮಾಂಸವನ್ನು ತಿನ್ನುವ ಆಸೆಯಾಗಿದೆ. ಯಾವ ಅಂಗದಿಂದ ಮೊದಲು ತಿನ್ನಲು ಪ್ರಾರಂಭ ಮಾಡಲಿ?' ಎಂದಿತು.

ರಾಮುವಿನ ಪರಿಸ್ಥಿತಿ ಈಗ 'ಅತ್ತ ದರಿ ಇತ್ತ ಪುಲಿ' ಎಂಬಂತಾಯಿತು. 'ನನ್ನ ದೇಹದ ಯಾವ ಅಂಗವನ್ನು ಮೊದಲು ತಿನ್ನಲು ನಿನಗೆ ಆಸೆಯಾಗುತ್ತದೆಯೋ ಅಲ್ಲಿಂದ ಪ್ರಾರಂಭ ಮಾಡು' ಎಂದನು ರಾಮು.

ರಾಮುವಿನ ಒಪ್ಪಿಗೆ ಸಿಕ್ಕಿದ ತಕ್ಷಣ ನರಿಯಣ್ಣ ಚಂಗನೆ ಜಿಗಿದು ಕಾಲಿನ ಮಾಂಸವನ್ನು ತಿನ್ನಲು ಹಾರಿತು. ರಾಮು ಭಯದಿಂದ ವಿಕಾರವಾಗಿ ಕಿರುಚಿದ. ರಾಮುವಿನ ಕಿರುಚಾಟ ನೋಡಿ ನರಿಗೆ ಭಯವಾಯಿತು. ಅವನ ದೇಹದೊಳಗೆ ಭೂತ ಸೇರಿರಬೇಕೆಂದುಕೊಂಡು ಹೆದರಿ ಅಲ್ಲಿಂದ ಓಡಿ ಹೋಯಿತು.

ಹುಲಿ ಒಂದು ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿತ್ತು. ನರಿ ಓಡುತ್ತಾ ಹುಲಿಯ ಬಳಿಗೆ ಬಂದಿತು. 'ಹುಲಿಯಣ್ಣ, ಮನುಷ್ಯ ನಿನ್ನನ್ನು ಕೊಲ್ಲಲು ಬಂದಾಗ ಜೀವವನ್ನು ಉಳಿಸಿದ್ದೇನೆ. ನೀನು ನನಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಅಲ್ಲವೇ?' ಎಂದಿತು.

'ನಾನು ಕಾಡಿನ ರಾಜ. ನನಗೆ ಯಾರ ಭಯವೂ ಇಲ್ಲ. ಅಲ್ಲದೇ ನಿನಗೆ ನಾನು ಯಾವ ಮಾತುಗಳನ್ನು ಕೊಟ್ಟಿದ್ದೆ ಹೇಳು?. ಇಲ್ಲಿಂದ ಹೊರಟು ಹೋಗುತ್ತೀಯಾ? ಇಲ್ಲವೇ ನನಗೆ ಆಹಾರ ಆಗುತ್ತೀಯಾ?' ಎಂದು ಹುಲಿಯಣ್ಣ ಸಿಟ್ಟಿನಿಂದ ಜೋರಾಗಿ ಗರ್ಜಿಸಿ ನರಿಯ ಮೇಲೆರಗಿ ಹೋಯಿತು. ನರಿ ಪ್ರಾಣ ಭಯದಿಂದ ಅಲ್ಲಿಂದ ಕಾಲ್ಕಿತ್ತಿತು. ಬೇಸರದಿಂದ 'ಈ ಪ್ರಪಂಚದಲ್ಲಿ ಯಾರಿಗೂ ಕೃತಜ್ಞತೆ ಎಂಬುದೇ ಇಲ್ಲ. ಇನ್ನು ಮುಂದೆ ನನ್ನ ಪರಿವಾರಕ್ಕೆ ಹುಲಿ, ಮನುಷ್ಯ ಯಾರನ್ನೂ ನಂಬಬಾರದು ಎಂದು ತಿಳಿ ಹೇಳುತ್ತೇನೆ' ಎಂದುಕೊಳ್ಳುತ್ತಾ ತನ್ನ ಮನೆ ಕಡೆ ನಡೆಯಿತು. ■



# ಪ್ರೀತಿಯ ಸದಸ್ಯ

■ ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ
ಕಲೆ: ಸಂತೋಷ್ ಸಸಿಹಿತ್ಲು

ಸಿಕ್ಕಿತು ನಾಯಿಮರಿ
ಬೀದೀಲಿ
ಸುಮ್ಮನೆ ಕೂತಿತ್ತು
ನಿದ್ದೇಲಿ

ನೋಡಲು ಬಲು
ಅಂದವಿತ್ತು
ಹತ್ತಿರ ಹೋದೆ
ಪ್ರೀತಿಯ ಹೊತ್ತು

ಮೆತ್ತಗೆ ಸವರಿದೆ
ತಲೆಯನ್ನು
ಮುದ್ದಾಗಿ ಮುದುಡಿತು
ಮೈಯನ್ನು

ಎದೆಗಪ್ಪಿ ತಂದೆನು
ಮನೆಗೆ
ಹಾಲನು ಹಾಕಿದೆ
ಬಟ್ಟಲಿಗೆ

ಪಿಳಿ ಪಿಳಿ ಕಣ್ಣನು
ಬಿಟ್ಟಿತು
ಲೊಚ ಲೊಚ ಹಾಲನು
ನೆಕ್ಕಿತು

ಮೆಟ್ಟಿಲು ಹತ್ತಿ
ಇಳಿಯಿತು
ಅಂಗಳದ ತುಂಬಾ
ಆಡಿತು

ಚೆಂದದ ಹೆಸರನು
ಕರೆದೆ
ಕೆಂದ ಕೆಂದ
ಕೆಂದಾ.... ಕೆಂದಾ...

ತಲೆಯನು ತೂಗಿತು
ಖುಷಿಯಿಂದ
ಕುಯ್ಲಿ ಕುಯ್ಲಿ ಎಂದಿತು
ಮಾತಿಂದ

ಬಾಲ ಆಡಿಸಿ
ಕಿವಿಯ ನಿಮಿರಿಸಿ
ನಾನಾ ರೀತಿಯ
ಆಟ ತೋರಿಸಿ

ಸಂತಸ ಮನದಲ್ಲಿ
ತುಂಬಿತು
ದಿನ ದಿನ ಕೆಂದ
ಬೆಳೆಯಿತು

ಬಣ್ಣದ ಬೆಲ್ಟ್
ಹಾಕಿದೆ
ಆಟದ ಚೆಂಡು
ಕೊಡಿಸಿದೆ

ಮಲಗಲು ರಟ್ಟಿನ
ಪುಟ್ಟ ಮನೆ
ಬೆಳಗು ಸಂಜೆ
ಜೊತೆಗಾಡುವೆ ನಾನೇ

ಬಾಲ ಆಡಿಸಿ
ಕಿವಿಯ ನಿಮಿರಿಸಿ
ನಾನಾ ರೀತಿಯ
ಆಟ ತೋರಿಸಿ

ನಂಬಿಕೆ ಹುಟ್ಟಿತು
ನಮ್ಮಲ್ಲೂ
ನಮ್ಮನು ಬಿಟ್ಟು
ಹೋಗದು ಎಲ್ಲೂ

ಕೆಂದ ಈಗ ಅಲ್ಲ
ಬೀದಿ ನಾಯಿ
ನಮ್ಮ ಕುಟುಂಬದ
ಪ್ರೀತಿಯ ಸದಸ್ಯ ■